620

ತಾರೀಖು 10ನೇ ಮೇ 1895.

ನಂ. 20098—ಜಿ. 5321.—ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ, ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಸಿ. ನಾರಾಯಣರಾಯರವರು ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು, ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಹಾಸನ ಡಿಸ್ಟ್ರಿಕ್ಟ ಆಫಿಸ್ ಜೂ ಡಿಪಟಿ ಹೆಡ್‌ಮುನಿಷಿ ಷಿಕಾರಿಪುರ ಕೃಷ್ಣಪ್ಪನವರು ಹಂಗಾಮಿ ತರೀಕ್ ಮಂಜರಾಬಾದ್ ತಾಲ್ಲೂಕು ಅಮಲ್ದಾರರಾಗಿ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟು, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ 12ನೆಯ ಸೆಕ್ಷರ್ ಅನುಸರಿಸಿ, ಎರಡನೆಯ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ, 1859ನೆಯ ಇಸವಿ XIIIನೆಯ ನಂಬರ್ ಬ್ರೀಚಾಫ್ ಕಂಟ್ರಾಕ್ಟ್ ಆಕ್ಟಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಿಸುವದಕ್ಕೆ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಮೇ 1895.

ನಂ. 20459—ಜಿ. 5386.—ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆಯ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗ ಡಿಸ್ಟ್ರಿಕ್ಟ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಟಿ. ಎಸ್. ಮಿರ್ಕವಮೂಲುದ್ದೀ ಅಲ್ಲೀಖಾನರವರು, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು 25 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಚಿತ್ರದುರ್ಗ ಡಿಸ್ಟ್ರಿಕ್ಟ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಎಚ್. ರಾಮಾನುಜಯ್ಯಂಗಾರ್ಯರವರು ಮೆಸ್ಸರ್ ಟಿ. ಎಸ್. ಮಿರ್ಕವಮೂಲುದ್ದೀ ಅಲ್ಲೀಖಾನರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಮ್ಮ ಸ್ವಂತಕೆಲಸಗಳಿಂದಿಗೆ, ಡಿಸ್ಟ್ರಿಕ್ಟ ಟ್ರೆಜರಿ ಇಚಾರ್ಜಿನಲ್ಲಿರತಕ್ಕದ್ದು.

ನಂ. 20461—ಜಿ. 5388.—ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 188ನೆಯ ಆರ್ಟಿಕಲ್ ಅನುಸರಿಸಿ, ತುರುವೇಕೆರೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಅಲೀಖಾನರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ಎಂಟು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಡೆಪ್ಯುಟಿ ಅಮಲ್ದಾರರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಿಪಟೂರ ತಾಲ್ಲೂಕು ಅಮಲ್ದಾರರು ತುರುವೇಕೆರೆ ಸಬ್ ತಾಲ್ಲೂಕು ಇಚಾರ್ಜಿನಲ್ಲಿರುವರು.

ತಾರೀಖು 15ನೇ ಮೇ 1895.

ನಂ. 20574—ಜಿ. 5422.—ಮೈಸೂರು ಗವರ್ನಮೆಂಟ್ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿಯವರಾದ ಮೆಸ್ಸರ್ ಎಚ್. ಜೆ. ಭಾಭಾ ಯವರಿಗೆ, 1895ನೆಯ ಇಸವಿ ಮೇ 6ನೇ ತಾರೀಖಿನ್ನಳ್ಳ 19636—ಜಿ. 5223ನೆಯ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟ ಹತ್ತು ದಿನಗಳ ಕ್ಯಾಜುಯಲ್ ರಜಾ ಇದರಿಂದ ಅಯಿದು ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ಹುಕುಂ ಬಮೋಜೀಬ್,

ಎಲ್. ಅನಂತಸಾಮಿರಾವ್,
ಅಫಿಷಿಯೇಟಿಂಗ್ ಚೀಫ್ ಸೆಕ್ರೆಟರಿ.

ನಂ. 18928—ಜಿ. 1175, ತಾ॥ 23ನೇ ಏಪ್ರೆಲ್ 1895.

ಖೈದಿಗಳನ್ನು ಹಾಜರ್‌ಪಡಿಸಿಕೊಂಡು ಅವರ ಸಾಕ್ಷ್ಯವನ್ನು ತೆಗದುಕೊಳ್ಳುವ ಬಗ್ಯೂ ಅವರ ಮೇಲೆ ಪ್ರೊಸೆಸ್ ಜಾರಿಯಾಗುವ ಬಗ್ಯೂ ಸಾಲಭ್ಯಗಳನ್ನುಂಟುಮಾಡಲು ಹುಟ್ಟಿದ ರೆಗ್ಯುಲೇಷ್ಯ ಅಂದರೆ 1894ನೇ ಇಸವಿಯ Vನೇ ನಂಬರ್ ರೆಗ್ಯುಲೇಷನಿನ 8ನೇ ಸೆಕ್ಷರ್ ನಿಯಮಗಳನುಸರಿಸಿ, ಮೈಸೂರು ಸರ್ಕಾರದವರು ಆಜ್ಞಾಪಿಸುವದೇನಂದರೆ—ಯಾವ ಸಿವಿಲ್ ಯಾ ಕ್ರಿಮಿನಲ್ ಕೋರ್ಟಿನವರಾಗಲಿ ಇದರಡಿಕಂಡ ಖೈದಿಗಳು ಯಾ ಆ ತರಗತಿಗೆ ಕೀರಿದ ಖೈದಿಗಳನ್ನು ಅವರ ಸಾಕ್ಷ್ಯವನ್ನು ತೆಗದುಕೊಳ್ಳುವದಕ್ಕೋಸ್ಕರ ಖಂದೀಖಾನೆಯಿಂದ ಆಚೆಗೆ ಬರಮಾಡಿಕೊಳ್ಳಲು ಪ್ರೊಸೆಸ್ ಮೂಲಕ ಬಲಾತ್ಕರಿಸಕೂಡದು.

(a) ಮರಣ ದಂಡನೆ ಪಡೆದ ಖೈದಿಗಳು.

(b) ತಹ ಉಮ್ಮರ್ ಸಜಾ ಪಡೆದ ಖೈದಿಗಳು.

(c) ಕ್ರೂರಸ್ವಭಾವವುಳ್ಳ ಮತ್ತು ಅಂಥಾವರುಗಳನ್ನು ಹೊರಗೆ ಕರಿಸೋಣದರಿಂದ ಅಪಾಯವುಂಟಾಗಬಹುದೆಂದು ಜೈಲ್ ಯಾ ಲಾಕಪ್ ಚಾರ್ಜ್‌ಳ್ಳ ಆಫಿಸರರು ಅಭಿಪ್ರಾಯಪಡುವಂಥಾ ಖೈದಿಗಳು.